- -                    ಓ ಎಸ್ ನಂ.131/2025

ಪಿ.ಡಬ್ಲ್ಯೂ :1

ದಿನಾಂಕ : 17-01-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದ:

ನಾನು ನನ್ನ ಸಾಕ್ಷಿ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಹಾಕಿರುತ್ತೇನೆ.

ದಾವೆಯೊಡನೆ ವಾದಿಯು ಸಲ್ಲಿಸಿರುವ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಲು ಕೋರುತ್ತೇನೆ .

ಸಾಕ್ಷಿಯು ಗುರುತಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ನಿಶಾನೆಗಳಾಗಿ ಗುರುತಿಸಲಾಯಿತು .

| | |
|---|---|
| ನಿಪಿ-1<br>ನಿಪಿ -1 (ಎ ಮತ್ತು ಬಿ ) | ದಿ: 05-12-2023 ರಂದು ಪ್ರತಿವಾದಿಗಳು ದಾವಾ ಸ್ವತ್ತಿಗೆ ಸಂಬಂಧಿಸಿ ನನಗೆ ಬರೆದುಕೊಟ್ಟಿರುವ ನೋಂದಾಯಿತ ಸ್ವಾಧೀನ ರಹಿತ ಅಸಲು ಕ್ರಯದ ಕರಾರು ಪತ್ರ , ಸಾಕ್ಷಿಯು ನಿಪಿ -1 ರ ಎಲ್ಲಾ ಪುಟಗಳಲ್ಲಿ ಗುರುತಿಸಿದ ಅವರ ಮತ್ತು ಪ್ರತಿವಾದಿಯ ಸಹಿಗಳು. ನಿಪಿ -1 ಕ್ಕೆ ಕೆಂಪರಾಜು ಮತ್ತು ರಂಗಸ್ವಾಮಯ್ಯ ರವರು ಸಾಕ್ಷಿಯಾಗಿ ಸಹಿ ಮಾಡಿದ್ದಾರೆ . ಶಿವಶಂಕರ್ ರವರು ನಿಪಿ -1 ನ್ನು ತಯಾರಿಸಿಕೊಟ್ಟಿದ್ದಾರೆ . |
| ನಿಪಿ-2 | ದಾವಾ ಸ್ವತ್ತಿಗೆ ಸಂಬಂಧಿಸಿದ 7 ಪುಟಗಳ ಒಂದು ಗಣಕೀಕೃತ ಪಹಣಿ |
| ನಿಪಿ-3 | ದಾವಾ ಸ್ವತ್ತಿಗೆ ಸಂಬಂಧಿಸಿದ ಎಂ ಆರ್ ಟಿ 11/2016-17 |
| ನಿಪಿ-4 | ದಿ: 25-02-2025 ರಂದು ಪ್ರತಿವಾದಿಗೆ ವಕೀಲರ ಮೂಲಕ ನೀಡಿದ್ದ ನೋಟಿಸಿನ ಕಚೇರಿ ಪ್ರತಿ |
| ನಿಪಿ-5 ಮತ್ತು 6 | ಅಂಚೆ ರಸೀದಿ ಮತ್ತು ಅಂಚೆ ಸ್ವೀಕೃತಿ |
| ನಿಪಿ-7 | ದಿ: 03-03-2025 ರಂದು ಪ್ರತಿವಾದಿಯು ನೀಡಿರುವ ಪ್ರತ್ಯುತ್ತರ ನೋಟಿಸ್ |
| | |

(ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .